# ನಾಗರಿಕ ಪ್ರಜ್ಞೆ

ಇತ್ತೀಚೆಗಷ್ಟೆ ನಾವು ಪರಿಸರ ದಿನವನ್ನು ಆಚರಿಸಿಕೊಂಡಿದ್ದೇವೆ (ಜೂನ್, 5). ವಿಶ್ವದ ಅತ್ಯಂತ ಕೊಳಕು ನಗರವೆಂಬ ಕುಖ್ಯಾತಿಯನ್ನು ನಮ್ಮದೇ ಆದ ರಾಷ್ಟ್ರ ರಾಜಧಾನಿ ದೆಹಲಿ ಪಡೆದುಕೊಂಡಿದೆ. ಅಷ್ಟೇ ಅಲ್ಲ, ಪ್ರಪಂಚದ 20 ಮಲಿನ ನಗರಗಳಲ್ಲಿ 13 ನಗರಗಳು ಭಾರತದಲ್ಲೆ ಇವೆ. ಅದರಲ್ಲಿ ಬೆಂಗಳೂರು ಸೇರಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಒಂದು ಹಂತದಲ್ಲಿ ಇಂತಹ ಅವಘಡಗಳನ್ನು ಅನುಭವಿಸುತ್ತಲೇ ಮುಂದೆ ಸಾಗಬೇಕಾಗುತ್ತದೆ ಎಂಬುದನ್ನು ಒಪ್ಪಿಕೊಂಡರೂ ಸಕಾಲಿಕ ಮುನ್ನೆಚ್ಚರಿಕೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ದೇಶವು ಅತ್ಯಂತ ಅಪಾಯಕಾರಿ ಸನ್ನಿವೇಶಕ್ಕೆ ತನ್ನನ್ನೆ ತಾನು ಒಡ್ಡಿಕೊಳ್ಳುತ್ತದೆ ಮತ್ತು ಇತರರ ಕಟು ವಿಮರ್ಶೆಗೆ ಒಳಪಡಬೇಕಾಗುತ್ತದೆ ಎಂಬುದು ಅಷ್ಟೇ ಸತ್ಯ. ಇತರ ದೇಶಗಳಿಗೆ ಹೋಲಿಸಿಕೊಂಡರೆ ನಮ್ಮ ನಾಗರಿಕ ಪ್ರಜ್ಞೆಗೆ ಗರ ಬಡಿದಿದೆ ಎಂದರೆ ಉತ್ಪ್ರೇಕ್ಷೆಯಾಗದೇನೊ. ಸಾಮಾನ್ಯರಾಗಿ ಪರಿಸರವನ್ನು ಕುರಿತ ನಮ್ಮ ತಿಳಿವಳಿಕೆ ಅತಿ ಕಡಿಮೆ ಎಂದೇ ಹೇಳಬೇಕು. ಪರಿಸರ ಮಾಲಿನ್ಯಕ್ಕೆ ಏರುತ್ತಿರುವ ಜನಸಂಖ್ಯೆಯು ಒಂದು ಅತಿ ಮುಖ್ಯ ಕಾರಣವಾದರೂ ಸರ್ಕಾರದ ನಿರ್ಲಕ್ಷ್ಯವೂ ಒಂದು ಕಾರಣ. ನಮ್ಮ ಸಾರ್ವಜನಿಕ ನಡವಳಿಕೆಯೂ ಆ ಒತ್ತಡವನ್ನು ಸಂಬಾಳಿಸಿಕೊಳ್ಳುವ ದಿಕ್ಕಿನಲ್ಲಿಲ್ಲ.

ಸ್ವಚ್ಛ ಭಾರತದ ಅಭಿಯಾನ ಚಾಲ್ತಿಗೆ ಬಂದು ತಿಂಗಳುಗಳೇ ಆದರೂ ಅದರ ಕುರುಹು ಸುದ್ದಿಗಷ್ಟೇ ಸೀಮಿತವಾಗಿದೆ. ಗಣ್ಯರು ಬೆಳಗಿನ ವಾಯುವಿಹಾರದ ದಿರಿಸಿನಲ್ಲಿ ಕೈಗವುಸು, ಬಾಯ್ಗವುಸು ಮತ್ತು ತಂಪು ಕನ್ನಡಕದೊಂದಿಗೆ ಪೊರಕೆ ಹಿಡಿಯುವುದು ಈಗ ಒಂದು ಫ್ಯಾಷನ್ ಆಗಿದೆ. ಅವರಿಂದಲೇ ನಗರ ಸ್ವಚ್ಛವಾಗುತ್ತಿದೆಯೇನೊ ಎಂದು ಭಾಸವಾಗುವ ಹಾಗೆ. ಬೆಂಗಳೂರಿನ ಯಾವುದೇ ಬಡಾವಣೆಗೆ ಹೋದರೂ ಇನ್ನೂ ರಸ್ತೆ ಪಕ್ಕದಲ್ಲಿ, ಗಲ್ಲಿಯ ಮೂಲೆಯಲ್ಲಿ ಕಸದ ರಾಶಿ ಕಣ್ಣಿಗೆ ರಾಚುತ್ತದೆ. ಅವರು ಅತ್ತ ತೆರಳಿದ ನಂತರ ತಮ್ಮ ಕಾಯಕ ಮಾಡುವ ಪೌರ ಕಾರ್ಮಿಕರು ಬರಿಗೈಲಿ ಕಸ ಬಳಿಯಲು ಶುರು ಮಾಡುತ್ತಾರೆ. ಅದನ್ನು ತೆರೆದ ಲಾರಿಗಳಲ್ಲಿ ತುಂಬಿ ಸಾಗಿಸುತ್ತಾರೆ. ರಸ್ತೆಯ ಮೇಲೆ ಮತ್ತೆ ಕಸ ಚೆಲ್ಲುತ್ತಲೇ ಲಾರಿ ತೆರಳುತ್ತದೆ. ಅದರ ಹಿಂದೆ ಸಿಕ್ಕುವ ವಾಹನ ಸವಾರರು ಒಂದು ಕೈಯಲ್ಲಿ ಮೂಗು ಮುಚ್ಚಿಕೊಂಡೇ ಗಾಡಿ ಓಡಿಸುತ್ತಾರೆ. ಇನ್ನು ಯಾವ ರಕ್ಷಣೆಯೂ ಇಲ್ಲದೆ ಅದೇ ಕಾಯಕ ಮಾಡುವ ಆ ಕಾರ್ಮಿಕರ ಬವಣೆಗಳನ್ನು ಕೇಳುವವರಿಲ್ಲ.

ಸಾರ್ವಜನಿಕವಾಗಿ ಉಗುಳುವ ಚಟ ನಮ್ಮ ದೇಶಕ್ಕಂಟಿದ ಒಂದು ರೋಗವೆ ಸರಿ. ತಂಬಾಕು, ಗುಟ್ಕ ಜಗಿದು ಎಲ್ಲೆಂದರಲ್ಲಿ ಉಗಿಯುವುದು ಭಾರತಕ್ಕೆ ವಿಶಿಷ್ಟ ಎನ್ನಬಹುದು. ಇದನ್ನು ತಡೆಗಟ್ಟಲು ನಮ್ಮ ಪೌರಾಡಳಿತ ಅನೇಕ ಕಸರತ್ತುಗಳನ್ನು ಮಾಡಿದೆ. ಭವ್ಯ ಕಟ್ಟಡದ ಒಳಗಡೆ ಮೂಲೆಗಳಲ್ಲಿ ದೇವರ ಪಟಗಳನ್ನು ಅಂಟಿಸಿದರೂ ಬಾಯಲ್ಲಿ ನಿಲ್ಲಲಾರದ ಆ ದ್ರವತ್ಯಾಜ್ಯ ಹೇಗೋ ಸಾವರಿಸಿಕೊಂಡು ಅಲ್ಲೆ ಅಕ್ಕಪಕ್ಕ ಬೀಳುತ್ತದೆ. ರಸ್ತೆ ಬದಿ ಗೋಡೆಗಳ ಮೇಲೆ ಸಾಂಸ್ಕೃತಿಕ ವೈಭವವನ್ನು ಮೆರೆಸುವ ಕಲಾಕೃತಿಗಳನ್ನು ನಮ್ಮ ಕಲಾವಿದರು ಮೂಡಿಸಿದರು. ಆದರೂ ನಮ್ಮ ಸಂಕೋಚರಹಿತ ಜನರಿಗೆ ಮೂತ್ರ ವಿಸರ್ಜನೆಗೆ ಬಯಲು ಮತ್ತು ಗೋಡೆಯ ಮರೆಯೇ ಬೇಕು. ಈ ವಿಚಾರದಲ್ಲಿ ಹಳ್ಳಿಗಳನ್ನು ಪ್ರಶ್ನಿಸುವ ಹಾಗೇ ಇಲ್ಲ. ಶೌಚಾಲಯಗಳನ್ನು ಕಟ್ಟಿಕೊಳ್ಳಲು ಸರ್ಕಾರ ಸಹಾಯಧನ ನೀಡುತ್ತಿದೆ ಆದರೆ ಅವುಗಳು ಉಪಯೋಗಕ್ಕೆ ಬರುತ್ತಿಲ್ಲ ಅಥವ ಕಾಣೆಯಾಗುತ್ತಿವೆ. ಭಾರತದಲ್ಲಿ 620 ದಶಲಕ್ಷ ಜನರಿಗೆ ಇನ್ನೂ ಬಯಲೇ ಶೌಚಾಲಯವಾಗಿದೆ. ಅದರಲ್ಲು ಭಾರತ ಮೊದಲ ಸ್ಥಾನದಲ್ಲಿದೆ. 540 ದಶಲಕ್ಷ ಜನರಿಗೆ ಶೌಚಾಲಯ ಒದಗಿಸದ ಇಂಡೋನೇಶಿಯಾ ಎರಡನೆ ಸ್ಥಾನದಲ್ಲಿದೆ. ಈ ವಿಷಯದಲ್ಲಿ ನೆರೆಯ ಬಾಂಗ್ಲಾ ದೇಶ ತ್ವರಿತ ಪ್ರಗತಿ ಸಾಧಿಸಿದೆ. ಅಲ್ಲಿ ಶೌಚಕ್ಕೆ ಬಯಲನ್ನು ಬಳಸುವ ಜನ ಕೇವಲ ಶೇ. 3 ರಷ್ಟಿದ್ದಾರೆ.

ಇದರ ಹಿಂದೆ ಒಂದು ಮನಸ್ಥಿತಿ ಇದೆ. ಇಲ್ಲಿಯ ವ್ಯವಸ್ಥೆ ಕೆಟ್ಟಿದೆ ಎಂಬ ಭಾವ. ಅದನ್ನು ಸರಿಪಡಿಸಲಾಗದು ಎಂಬ ದೃಢ ನಂಬಿಕೆ. ಈ ಮನಸ್ಥಿತಿ ಸಾರ್ವಜನಿಕರು ಮತ್ತು ಸ್ವಚ್ಛತೆಯ ಜವಾಬ್ದಾರಿ ಹೊತ್ತವರು ಎರಡೂ ಕಡೆ ಇದ್ದಾರೆ. ಅದನ್ನು ಬದಲಿಸಲು ವ್ಯಾಪಕವಾದ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾದ ಅವಶ್ಯಕತೆಯಿದೆ.

ಬಂಡವಾಳಶಾಹಿಯ ಪಿತಾಮಹ ಆಡಮ್ ಸ್ಮಿತ್ ಬಂಡವಾಳಶಾಹಿಗಳನ್ನು ದ್ವೇಷಿಸುತ್ತಿದ್ದ. ಕಾರಣ ಅವರು ಗ್ರಾಹಕರನ್ನು ಹೀರುವ ಜನ ಎಂದು. ಇತ್ತೀಚೆಗೆ ಅವರಿಗೆ ದಾನ ಗುಣ ಬೆಳೆಯುತ್ತಿರುವುದು ಸಮಾಧಾನಕರ ವಿಷಯ.

ಭಾರತದ ಕಂಪೆನಿಯೊಂದು ತನ್ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ವರ್ಷಕ್ಕೆ ರೂ. 24 ಕೋಟಿ ಸಂಬಳ ನೀಡುತ್ತದೆ. ಅಂತಹ ಖಾಸಗಿ ಸಂಸ್ಥೆಗಳು ಸಾಮಾಜಿಕ ಜವಾಬ್ದಾರಿಯನ್ನು ಹೆಚ್ಚಿನ ಮಟ್ಟದಲ್ಲಿ ಹೊತ್ತು ದೇಶಕ್ಕೆ ಮೂಲಭೂತ ಸಾರ್ವಜನಿಕ ಸೌಕರ್ಯವನ್ನು ಒದಗಿಸುವತ್ತ, ಜನಕೋಟಿಯಲ್ಲಿ ನಾಗರಿಕ ಪ್ರಜ್ಞೆಯನ್ನು ಬೆಳೆಸುವತ್ತ ಮನಸ್ಸು ಮಾಡಬೇಕು.

■ ಮೂಚಿ

## ಮಾತೇ ಮುತ್ತು

★ ಸುಲಭವಾದ ಸಂಗತಿಗಳನ್ನು ಮೊದಲು ಮಾಡಿದರೆ, ಆ ಬಳಿಕ ಸಾಕಷ್ಟು ಪ್ರಗತಿ ಸಾಧಿಸಬಹುದು. ಉದ್ಯಮದ ಅತ್ಯಂತ ಸುಲಭ ಸೂತ್ರವಿದು ಎನ್ನುವುದು ನನ್ನ ಅನಿಸಿಕೆ.

-ಮಾರ್ಕ್ ಜೂಕರ್‌ಬರ್ಗ್

★ ಬೇರೆಯವರ ತಪ್ಪುಗಳಿಂದ ಪಾಠ ಕಲಿಯಿರಿ. ನೀವೇ ಆ ತಪ್ಪುಗಳನ್ನು ಮಾಡಿ ಕಲಿಯುಷ್ಟು ಬದುಕು ದೀರ್ಘವಾಗಿರುವುದಿಲ್ಲ.

-ಚಾಣಕ್ಯ

★ ನೈಜ ಗೆಳೆಯರು ಪರಸ್ಪರರ ಬಗ್ಗೆ ತೀರ್ಪು ಕೊಡುವುದಿಲ್ಲ. ಅವರು ಒಟ್ಟಾಗಿ ಇತರರ ಬಗ್ಗೆ ತೀರ್ಪು ನೀಡುತ್ತಾರೆ.

-ಚೇನೀ ಗಾದೆ

★ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದರಲ್ಲಿ ನನಗೆ ನಂಬಿಕೆಯಿಲ್ಲ. ನಾನು ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇನೆ, ಬಳಿಕ ಅವು ಸರಿಯಾಗುವಂತೆ ನೋಡಿಕೊಳ್ಳುತ್ತೇನೆ.

-ರತನ್ ಟಾಟಾ

★ ಭೌತಿಕ ಆಸೆಗಳಲ್ಲಿ ಸಂತೋಷ ಸಿಗುತ್ತದೆ ನಿಜ. ಆದರೆ ಆಸೆಗಳೇ ಇಲ್ಲದಿರುವುದು ಹೆಚ್ಚು ಸಂತೋಷದಾಯಕ.

-ನಾಗಾರ್ಜುನ

★ ನಿನ್ನೆ ಮುಗಿದಿದೆ, ನಾಳೆ ಇನ್ನಷ್ಟೇ ಬರಬೇಕಿದೆ. ಇಂದು ಮಾತ್ರ ನಮ್ಮ ಜತೆಗಿದೆ. ಈಗಲೇ ಕೆಲಸ ಶುರು ಮಾಡೋಣ.

-ಮದರ್ ತೆರೀಸಾ

★ ಸ್ತೂಪಗಳಲ್ಲಿ, ಗುಮ್ಮಟಗಳಲ್ಲಿ, ಚರ್ಚುಗಳಲ್ಲಿ, ಕೀರ್ತನೆಗಳಲ್ಲಿ ಅವನನ್ನು ಹುಡುಕಬೇಡ. ದೇವರೆಂದರೆ ಯಾರು? ಅವನು ಶ್ವಾಸದೊಳಗಿನ ಶ್ವಾಸ.

-ಸಂತ ಕಬೀರ

★ ಎಷ್ಟು ವರ್ಷಗಳ ಕಾಲ ಜೀವಿಸಿರುತ್ತೇನೆಯೋ, ಅಷ್ಟೂ ವರ್ಷಗಳ ಕಾಲ ಕಲಿಯುವುದಿದೆ.

-ರಾಮಕೃಷ್ಣ ಪರಮಹಂಸ

★ ಸಂತೋಷವಾಗಿರುವ ಹುಡುಗಿಯೇ ಅತ್ಯಂತ ಸುಂದರಿ.

-ಆಡ್ರೇ ಹೆಬರ್ನ್

★ ಒಳ್ಳೆಯ ಪುಸ್ತಕಕ್ಕೆ ಕೊನೆ ಎನ್ನುವುದು ಇರುವುದಿಲ್ಲ.

-ಆರ್.ಡಿ.ಕಮ್ಮಿಂಗ್

★ ಯಾರೂ ನೋಡದಿದ್ದಾಗ ನಾವೇನು ಮಾಡುತ್ತೇವೆಯೋ ಅದೇ ನಮ್ಮ ನಡವಳಿಕೆ.

-ಜಾಕ್ಸನ್ ಬ್ರೌನ್ ಜೂನಿಯರ್

★ ಸಮಾಜವೊಂದು ಮಹಿಳೆಯ ಮುಕ್ತ ಅಭಿವೃದ್ಧಿಗೆ ಅವಕಾಶ ಕೊಡುವುದಿಲ್ಲ ಎಂದಾದರೆ, ಆ ಸಮಾಜವನ್ನು ಮರುರೂಪಿಸಬೇಕಾಗುತ್ತದೆ.

-ಎಲಿಜಬೆತ್ ಬ್ಲ್ಯಾಕ್‌ವೆಲ್

★ ನಾಯಕನೊಬ್ಬ ಮಾಡಬೇಕಾದ ಮೊದಲ ಕೆಲಸವೆಂದರೆ ಭರವಸೆಯನ್ನು ಜೀವಂತವಾಗಿ ಇಡುವುದು.

-ಜೋ ಬ್ಯಾಟನ್